**ದಿನಾಂಕ 03.02.2020 ರಂದು ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ನಡೆದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು**

ಹಾಜರಿದ್ದ ಅಧಿಕಾರಿಗಳ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

---

ಆಯುಕ್ತರು, ಗ್ರಾನೀಸರವರು ಸಭೆಯ ಅಧ್ಯಕ್ಷತೆವಹಿಸಿದ್ದ ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರನ್ನು, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ರವರನ್ನು ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪಂಚಾಯತ್ ರಾಜ್, ಗ್ರಾಪಂ.ರಾಜ್ ಇಲಾಖೆ ರವರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಸಭೆಗೆ ಆಗಮಿಸಿದ್ದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಇಲಾಖಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು.

ಮಾನ್ಯ ಮುಖ್ಯ ಮಂತ್ರಿಗಳು ಸಭೆಯಲ್ಲಿ ಭಾಗವಹಿಸಿ ಮುಖ್ಯ ಕಾರ್ಯವಿರ್ವಾಹಕ ಅಧಿಕಾರಿಗಳನ್ನು ಉದ್ದೇಶಿಸಿ ಶೌಚಾಲಯ ನಿರ್ಮಾಣದ ಬಗ್ಗೆ ಕಡ್ಡಾಯವಾಗಿ ವಿಶೇಷ ಗಮನ ನೀಡಲು, ಕಾಮಗಾರಿಗಳ ಅನುಷ್ಠಾನದಲ್ಲಿ ಗುಣಮಟ್ಟ ಕಾಯ್ದುಕೊಳ್ಳಲು, ಶುದ್ಧ ಕುಡಿಯುವ ನೀರು ಘಟಕಗಳ ಸಮರ್ಪಕ ನಿರ್ವಹಣೆ ಹಾಗೂ ODF ಘೋಷಣೆಯಾದ ಗ್ರಾಮಗಳಲ್ಲಿ ಈಗಲು ಕಂಡು ಬರುವ ಶೌಚಾಲಯರಹಿತ ಕುಟುಂಬಗಳನ್ನು ಗುರುತಿಸಿ ಅವರಿಗೆ LOB & NOLB ಯೋಜನೆಗಳಡಿ ಶೌಚಾಲಯಗಳನ್ನು ಒದಗಿಸಲು ಕ್ರಮ ವಹಿಸಲು ಸೂಚನೆ ನೀಡಿದರು.

ಮಾನ್ಯ ಸಚಿವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಗ್ರಾಮೀಣ ಕರ್ನಾಟಕವನ್ನು ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಲಾಗಿದ್ದರೂ ಇಲಾಖೆಯ ಆಂತರಿಕ ಮೌಲ್ಯಮಾಪನ ವರದಿಯನ್ವಯ ಶೇ.25-30ರಷ್ಟು ಶೌಚಾಲಯಗಳ ನಿರ್ಮಾಣ ಮತ್ತು ಬಳಕೆ ಆಗದಿರುವುದರಿಂದ ಈ ನಿಟ್ಟಿನಲ್ಲಿ LOB & NOLB ಯಡಿ ಶೌಚಾಲಯ ನಿರ್ಮಿಸಲು ತ್ವರಿತ ಕ್ರಮ ವಹಿಸಲು ಕರೆ ನೀಡಿದರು. ಶೌಚಾಲಯ ನಿರ್ಮಿಸಲು ರೇಷನ್ ಕಾರ್ಡ್‌ಗಳ ಅವಶ್ಯಕತೆ ಇದ್ದು, ರೇಷನ್ ಕಾರ್ಡ್ ರಹಿತ ಅರ್ಹ ಫಲಾನುಭವಿಗಳಿಗೆ ಸಂಬಂಧಪಟ್ಟ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಶೌಚಾಲಯ ನಿರ್ಮಾಣ ಮಾಡಲು ರೇಷನ್ ಕಾರ್ಡ್ ಗಳನ್ನು ವಿತರಿಸಲು ಸಲಹೆ ನೀಡಿದರು. ಅಲ್ಲದೇ ಘನ ತ್ಯಾಜ್ಯ ನಿರ್ವಹಣೆಗೆ ಪ್ರತಿ ಗ್ರಾಮ ಪಂಚಾಯಿತಿಗೆ ಘಟಕ ಸ್ಥಾಪನೆ ಬದಲು Cluster ಗಳ ಮೂಲಕ ತ್ಯಾಜ್ಯ ಘಟಕ ನಿರ್ಮಾಣ ಮಾಡುವುದರಿಂದ ಜಾಗದ ಸಮಸ್ಯೆ ನಿವಾರಣೆ ಹಾಗೂ ಘಟಕ ನಿರ್ವಹಣಾ ವೆಚ್ಚವನ್ನು ಕಡಿಮೆ ಮಾಡಬಹುದಾದ್ದರಿಂದ ಈ ನಿಟ್ಟಿನಲ್ಲಿ ಕ್ರಮ ವಹಿಸಲು ಸೂಚಿಸಿದರು. ಒಟ್ಟಾರೆಯಾಗಿ ಇಲಾಖೆಯಿಂದ ಅನುಷ್ಠಾನಿಸಲಾಗುತ್ತಿರುವ ಗ್ರಾಮೀಣ ಕುಡಿಯುವ ನೀರು, ಸ್ವಚ್ಛ ಭಾರತ ಅಭಿಯಾನ, ನರೇಗಾ ಇವೆ ಮುಂತಾದ ಪ್ರಮುಖ ಯೋಜನೆಗಳಡಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಾಕ ಅಧಿಕಾರಿಗಳು ಸಕ್ರಿಯವಾಗಿ ತೊಡಗಿ ಅವಶ್ಯಕತೆ ಇರುವೆಡೆ ಜಿಲ್ಲಾಧಿಕಾರಿಗಳ ಸಮನ್ವಯದೊಂದಿಗೆ ಗ್ರಾಮೀಣ ಜನರ ಒಳಿತಿಗಾಗಿ ಕಾರ್ಯ ನಿರ್ವಹಿಸಲು ಕರೆ ನೀಡಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರು ಮಾತನಾಡುತ್ತಾ ಗ್ರಾಮೀಣ ನೀರು ಸರಬರಾಜು ಯೋಜನೆಯಡಿ ಈ ವರೆವಿಗೆ ಸ್ಥಾಪಿತವಾದ ಶುದ್ಧ ಕುಡಿಯುವ ನೀರು ಘಟಕಗಳು ಸಂಪೂರ್ಣವಾಗಿ ಕಾರ್ಯ ನಿರತವಾಗುವಂತೆ ಕ್ರಮವಹಿಸಲು, ಪೂರ್ಣಗೊಂಡ ಎಲ್ಲಾ ಬಹುಗ್ರಾಮ ಯೋಜನೆಗಳು ಫಲಪ್ರದವಾಗಿರುವುದನ್ನು ಖಚಿತ ಪಡಿಸಲು, LOB & NOLB ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ, ನರೇಗಾ ಯೋಜನೆಯಡಿ ಅರಣ್ಯೀಕರಣ, ಜಲಾನಯನ ಅಭಿವೃದ್ಧಿ ಕಾಮಗಾರಿಗಳಿಗೆ ಹೆಚ್ಚಿನ ಒತ್ತು ನೀಡಲು ಹಾಗೂ 2020-21 ನೇ ಸಾಲಿನಲ್ಲಿ ವಿಶ್ವ ಪರಿಸರದ ದಿನದಂದು ರಾಜ್ಯಾದ್ಯಂತ ಸಸಿ ನೆಡಲು ಈಗಿನಿಂದಲೇ ಕಾರ್ಯತತ್ಪರರಾಗಲು ಸೂಚಿಸಿದರು.

ವಿಷಯಸೂಚಿಯಂತೆ ಕೂಲಂಕುಷ ಚರ್ಚೆ ನಡೆಸಿ ಸಭೆಯು ಈ ಕೆಳಕಂಡ ನಿರ್ಣಯಗಳನ್ನು ಕೈಗೊಂಡಿತು.

I. **ಸ್ವಚ್ಛ ಭಾರತ ಅಭಿಯಾನ:**

1) ಸ್ವಚ್ಛ ಭಾರತ ಅಭಿಯಾನ ಯೋಜನೆಯಡಿ LOB ನ್ನು ದಿನಾಂಕ:15.02.2020 ರೊಳಗಾಗಿ ಎಲ್ಲಾ ಜಿಲ್ಲೆಗಳು ಪೂರ್ಣಗೊಳಿಸಿ ದಿನಾಂಕ:28.02.2020ರೊಳಗೆ ಪಾವತಿಗೆ ಕ್ರಮ ವಹಿಸುವುದು.

2) NOLB ರಡಿ ಅರ್ಹ ಫಲಾನುಭವಿಗಳ ವಿವರಗಳನ್ನು ದಾಖಲಿಸಲು ಕ್ರಮವಹಿಸುವುದು. ಇದಕ್ಕೆ ಪೂರಕವಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಂದ ಸರ್ವೆ ಮಾಡಿಸುವುದು.

3) NOLB ಯೋಜನೆಯ ಪರಿಣಾಮಾಕಾರಿ ಅನುಷ್ಠಾನಕ್ಕೆ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಮಟ್ಟದ ಅಧಿಕಾರಿಗಳು IEC ಚಟುವಟಿಕೆಗಳಿಗೆ ಹೆಚ್ಚಿನ ಒತ್ತು ನೀಡಲು ಕ್ರಮ.

4) ಘನ ತ್ಯಾಜ್ಯ ಘಟಕಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕೇವಲ ಕಟ್ಟಡ ನಿರ್ಮಾಣ ಪ್ರಕ್ರಿಯೆಯಂತೆ ಪರಿಗಣಿಸದೇ ಸಮಗ್ರ ನೈರ್ಮಲ್ಯಕ್ಕೆ ಪೂರಕ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಕ್ರಿಯಾ ಯೋಜನೆ ರೂಪಿಸುವುದು.

5) ಈ ಹಿಂದಿನ ಸಭೆಗಳಲ್ಲಿ ತಿಳಿಸಲಾದಂತೆ ಪ್ರತಿಯೊಂದು ಗ್ರಾಮ ಪಂಚಾಯಿತಿಗಳಲ್ಲಿ ಘನ ತ್ಯಾಜ್ಯ ಘಟಕಗಳ ಸ್ಥಾಪನೆಗಳ ಬದಲಿಗೆ 4-5 ಗ್ರಾಮ ಪಂಚಾಯಿತಿಗಳು ಸೇರಿ Cluster ಮಾದರಿಯಲ್ಲಿ ಘಟಕ ನಿರ್ಮಾಣ ಮಾಡುವುದರಿಂದ ಜಾಗದ ಸಮಸ್ಯೆ, ನಿರ್ವಹಣಾ ವೆಚ್ಚ ಕಡಿತ ಹಾಗೂ ಸೀಮಿತ ಸಿಬ್ಬಂದಿಗಳ ಬಳಕೆ ಇವೇ ಮುಂತಾದ ಪ್ರಯೋಜನೆಗಳನ್ನು ಪರಿಗಣಿಸಿ ಅದರಂತೆ ಕ್ರಮವಹಿಸುವುದು.

6) ಸ್ಥಳದ ಅಭಾವದಿಂದ ಘಟಕಗಳ ನಿರ್ಮಾಣದಲ್ಲಿ ವಿಳಂಬವಾಗಿದ್ದರೆ ಪ್ರಥಮ ಹಂತದಲ್ಲಿ ಹಸಿ ಮತ್ತು ಒಣ ಕಸ ಪ್ರತ್ಯೇಕಿಸಿ ಕಸ ಸಂಗ್ರಹಣೆ ಮಾಡಿ ಹಸಿ ಕಸವನ್ನು ವೈಜ್ಞಾನಿಕವಾಗಿ ಗೊಬ್ಬರವಾಗಿ ಪರಿವರ್ತಿಸಿ ಮರು ಬಳಕೆ ಮಾಡಲು ಹಾಗೂ ಒಣ ಕಸವನ್ನು ಬೇರೆಡೆಗೆ ಸ್ಥಳಾಂತರ ಮಾಡಿ ವಿಲೇವಾರಿ ಮಾಡುವುದು.

7) ಘಟಕ ನಿರ್ಮಾಣಕ್ಕೆ ಸ್ಥಳ ಗುರುತಿಸಿ ಜಿಲ್ಲಾಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಘಟಕ ನಿರ್ಮಾಣಕ್ಕೆ ಮುಂದಾಗಲು ಕ್ರಮವಹಿಸುವುದು.ಅವಶ್ಯಕತೆಯಿದ್ದಲ್ಲಿ ಸರ್ಕಾರವನ್ನು ಸಂಪರ್ಕಿಸುವುದು.

8) ಸದರಿ ಯೋಜನೆಯಡಿ ಸಮಾಲೋಚಕರ ಸೇವೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು IEC ಗೆ ಹೆಚ್ಚಿನ ಒತ್ತು ನೀಡುವ ಮೂಲಕ ಯೋಜನೆಯ ಯಶಸ್ವಿಗೆ ಶ್ರಮಿಸುವುದು.

9) ಯೋಜನೆಯಡಿ ಭರಿಸಲಾದ ವೆಚ್ಚವನ್ನು ಪಂಚತಂತ್ರ ತಂತ್ರಾಂಶದಲ್ಲಿ ಮಾತ್ರ ದಾಖಲಿಸದೇ IMIS ತಂತ್ರಾಂಶದಲ್ಲಿಯೂ ಸಹ ದಾಖಲಿಸಲು ಕ್ರಮ .

10) ಈವರೆವಿಗೆ ಅನುಷ್ಠಾನಿಸಲಾಗುತ್ತಿದ್ದ NRDWP ಯೋಜನೆಯ ಬದಲಿಗೆ "ಜಲ ಜೀವನ ಮಿಷನ್" ಎಂದು ಇನ್ನು ಮುಂದೆ ಅನುಷ್ಠಾನಿಸಬೇಕಿದ್ದು, ಪ್ರತಿ ಗೃಹಕ್ಕೂ ಕಾರ್ಯನಿರತ (FHTC) ನಲ್ಲಿ ಸಂಪರ್ಕ ನೀಡುವ ಉದ್ದೇಶ ಹೊಂದಿರುವ ಕುರಿತು ಹಾಗೂ ಜಲ ಜೀವನ ಮಿಷನ್ ಮಾರ್ಗಸೂಚಿಯ ಮುಖ್ಯಾಂಶಗಳನ್ನು ಸಭೆಯಲ್ಲಿ ಪ್ರಸ್ತುತ ಪಡಿಸಲಾಯಿತು.

11) 2020-21 ನೇ ಸಾಲಿನಿಂದ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಅನುಷ್ಠಾನ ಮಾಡಲು "ಜಲ ಜೀವನ ಮಿಷನ್" ಕಾರ್ಯಕ್ರಮದ ಸಂಬಂಧ ಏಪ್ರಿಲ್ ಒಳಗೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಬೇಕು.

12) ಸಮೀಕ್ಷೆ ಪ್ರಕಾರ ದೇಶದಲ್ಲಿ ನಳನೀರು ಸಂಪರ್ಕ ನೀಡಿರುವ ದಾಖಲಾತಿ ಶೇ.18 ಇದ್ದರೆ ರಾಜ್ಯದಲ್ಲಿ ಕಾರ್ಯನಿರತ ನಳನೀರು ಸಂಪರ್ಕ ನೀಡಿರುವ ಕುರಿತು ಶೇ.47.37 ಇರುವುದನ್ನು ಜಿಲ್ಲೆಗಳು ಪರಿಶೀಲಿಸಿ ತಪ್ಪು ವರದಿಯಾಗಿದ್ದಲ್ಲಿ ಪರಿಷ್ಕೃತ ಮಾಹಿತಿ ನೀಡುವುದು. ಮಾರ್ಚ್ 2020 ರ ನಂತರ ಭಾರತ ಸರ್ಕಾರದಿಂದ ಕಾರ್ಯನಿರತ ನಳನೀರು ಸಂಪರ್ಕ ವಿವರ ದಾಖಲಾತಿಯನ್ನು Freeze ಮಾಡಲಾಗುವುದರಿಂದ ವಾಸ್ತವ ಅಂಕಿ ಅಂಶಗಳನ್ನು **ದಿನಾಂಕ:20.03.2020 ರೊಳಗೆ** ಪರಿಷ್ಕರಿಸುವುದು. ವೈಯಕ್ತಿಕ ಗೃಹಗಳಿಗೆ ಈಗಾಗಲೇ ನಳನೀರು ಸಂಪರ್ಕ ನೀಡಲಾಗಿದ್ದರೂ ನೀರು ಪೂರೈಕೆ ಸಾಧ್ಯವಾಗದಿದ್ದಲ್ಲಿ ಅಂತಹ ಪ್ರಕರಣಗಳನ್ನು ಮಾರ್ಪಡಿಸಿ ವಾಸ್ತವ ವರದಿಯನ್ನು ನೀಡುವುದು.

13) "ಜಲ ಜೀವನ್ ಮಿಷನ್" ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಕೇಂದ್ರ ಸರ್ಕಾರದಿಂದ ಶೇ.25 ರಷ್ಟು ಅನುದಾನ ಪಡೆಯಲು ರಾಜ್ಯದಿಂದ ಶೇ.75 ರಷ್ಟು ಅನುದಾನ ತೊಡಗಿಸಿರುವ ಅವಶ್ಯಕತೆ ಇರುವುದನ್ನು ಪರಿಗಣಿಸಿ ಕೇಂದ್ರದಿಂದ ಹೆಚ್ಚಿನ ಅನುದಾನ ಪಡೆಯಲು ಪ್ರಸ್ತಾವನೆ ಸಲ್ಲಿಸುವುದು.

14) "ಜಲ ಜೀವನ್ ಮಿಷನ್" ಅನುಷ್ಠಾನದಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸುವುದು.

15) <u>ಕಾಂಕ್ರೀಟ್ ರಸ್ತೆ ನಿರ್ಮಾಣದ ಸಂದರ್ಭದಲ್ಲಿ</u> ನೀರು ಸರಬರಾಜು ಪೈಪ್ ಲೈನ್ ಅಳವಡಿಕೆ/ದುರಸ್ಥಿಗೆ ಅವಶ್ಯ ತಾಂತ್ರಿಕ ವಿನ್ಯಾಸ ಸಿದ್ಧಪಡಿಸುವುದು. ಯಾವುದೇ ಇಲಾಖೆಯಿಂದ, ಕಾಂಕ್ರೀಟ್ ರಸ್ತೆಗಳ ನಿರ್ಮಾಣ ಮಾಡುವ ಮುನ್ನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪೂರ್ವಾನುಮತಿ ಪಡೆಯಲು ನಿಬಂಧನೆ ಹೇರಲು ಕ್ರಮ ವಹಿಸುವುದು.

16) ಗೃಹ ಸಂಪರ್ಕಗಳಿಗೆ ನೀರು ಸಂಪರ್ಕದ ಘಟಕ ವೆಚ್ಚ (Unit Cost) ನ್ನು ಅಂದಾಜಿಸಿ ಅದರಂತೆ ನೀರು ತೆರಿಗೆ ನಿಗಧಿಪಡಿಸಲು ಕ್ರಮ ವಹಿಸುವುದು.

17) ಭಾರತ ಸರ್ಕಾರದಿಂದ ಗ್ರಾಮೀಣ ನೀರು ಸರಬರಾಜು ಯೋಜನೆಯನ್ನು "ಜಲ ಜೀವನ ಮಿಷನ್" ಎಂದು ನಾಮೀಕರಿಸಿರುವುದನ್ನು ರಾಜ್ಯದಲ್ಲಿ "ಮನೆಮನೆಗೆ ಗಂಗೆ" ಎಂದು ಮರು ನಾಮಕರಣ ಮಾಡಲು ಮಾನ್ಯ ಸಚಿವರು ಸೂಚನೆ ನೀಡಿದರು.

18) ಸದರಿ ಯೋಜನೆಯಡಿಯಲ್ಲಿ ಪ್ರಾಜೆಕ್ಟ್ ಸಪೋರ್ಟ್ ಏಜೆನ್ಸಿಗಳ ನೆರವು ಪಡೆದು ಕ್ರಿಯಾ ಯೋಜನೆಯನ್ನು ತಯಾರಿಸುವುದು.

19) ಪ್ರಸ್ತುತ ಸಾಲಿನಲ್ಲಿ ಅನುಮೋದನೆಗೊಂಡಿರುವ ಕ್ರಿಯಾಯೋಜನೆ ಬದಲಾವಣೆ ಅವಶ್ಯಕತೆಯಿದ್ದಲ್ಲಿ, ಜಿಲ್ಲಾ ಮಟ್ಟದಲ್ಲಿಯೇ ಸೂಕ್ತ ಬದಲಾವಣೆಗಳನ್ನು ಮಾಡಿಕೊಂಡು ಅನುಷ್ಠಾನಿಸಿ ತದ ನಂತರ ಮಂಜೂರಾತಿಗೆ ಸಲ್ಲಿಸುವುದು.

20) 2020-21ನೇ ಸಾಲಿನಿಂದ ಅನುಷ್ಠಾನಿಸಲಾಗುವ ಜಲ ಜೀವನ ಮಿಷನ್ ಅಡಿ ಪ್ರಸ್ತುತ ಸಾಲಿನ NRDWP ಯೋಜನೆಯ ಅಪೂರ್ಣ ಕಾಮಗಾರಿಗಳನ್ನು ಮುಂದುವರಿದ ಕಾಮಗಾರಿಗಳೆಂದು ಪರಿಗಣಿಸಲು ಅವಕಾಶವಿಲ್ಲದಿರುವುದರಿಂದ ಪ್ರಸ್ತುತ ಸಾಲಿನ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ಆದ್ಯತೆ ನೀಡುವುದು.

21) ಪ್ರಸ್ತುತ ಸಾಲಿನಲ್ಲಿ ಹಂಚಿಕೆಯಾಗಿ ಬಿಡುಗಡೆಗೊಂಡಿರುವ ಅನುದಾನವನ್ನು ಬಳಸಿಕೊಳ್ಳದಿದ್ದಲ್ಲಿ ಉಳಿಕೆ ಅನುದಾನವು ವ್ಯಪಗತವಾಗುವುದನ್ನು ಪರಿಗಣಿಸಿ ಬಿಡುಗಡೆಯಾಗಿರುವ ಸಂಪೂರ್ಣ ಅನುದಾನವನ್ನು ವಿನಿಯೋಗಿಸಲು ಕ್ರಮ ವಹಿಸುವುದು. ಉತ್ತರ ಕನ್ನಡ, ಕೊಡಗು, ಕಲ್ಬುರ್ಗಿ ಮತ್ತು ಉಡುಪಿ ಜಿಲ್ಲೆಗಳು ಶೇ.30ಕ್ಕಿಂತ ಕಡಿಮೆ ಪ್ರಗತಿ ಸಾಧಿಸಿದ್ದು, ಹೆಚ್ಚಿನ ಸಾಧನೆಗೆ ಮುತವರ್ಜಿ ವಹಿಸುವುದು.

22) ಈಗಾಗಲೇ ಅಳವಡಿಸಲಾದ ನೀರು ಶುದ್ಧೀಕರಣ ಘಟಕಗಳು ಜಲ ಮೂಲ ಕೊರತೆಯಿಂದ ಸ್ಥಗಿತಗೊಂಡಿದ್ದಲ್ಲಿ ಬೇರೆ ಜಲಮೂಲಗಳಿಂದ ಚಾಲನೆಗೊಳಿಸಲು ಕ್ರಮವಹಿಸುವುದು.

23) ಘಟಕಗಳ ದುರಸ್ತಿ ಸಾಧ್ಯತೆ ಇಲ್ಲದಿದ್ದಲ್ಲಿ Scrap ಮಾಡಿ ಹೊಸದಾಗಿ ಪ್ರಸ್ತಾವನೆ ಕಳುಹಿಸುವುದು.

24) ಜಿಲ್ಲೆಗಳಲ್ಲಿ ಹಾಲಿ ಇರುವ AEE ಗಳ ಹುದ್ದೆಗೆ ನಿವೃತ್ತ ಇಂಜಿನಿಯರ್ ಗಳ ಸೇವೆಯನ್ನು ಪಡೆಯಲು ಹಾಗೂ ನಿವೃತ್ತ ಅಧಿಕಾರಿಗಳು ಲಭ್ಯವಿಲ್ಲದಿದ್ದಲ್ಲಿ ಕನಿಷ್ಠ 3-4 ವರ್ಷದ ಅನುಭವ ಇರುವವರನ್ನು PMC ಮೂಲಕ ನೇಮಕಾತಿ ಮಾಡಿಕೊಳ್ಳುವುದು.

25) ಈವರೆವಿಗೆ ಪೂರ್ಣಗೊಳಿಸಲಾದ ಎಲ್ಲಾ MVS ಯೋಜನೆಗಳು ಚಾಲ್ತಿಯಲ್ಲಿರುವುದನ್ನು PDO ಗಳ ಮೂಲಕ ಖಾತ್ರಿಪಡಿಸಿಕೊಳ್ಳುವುದು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು Random ಚೆಕ್ ಮಾಡಿಕೊಳ್ಳುವುದು. ಅಲ್ಲದೆ MVS ಯೋಜನೆಯಡಿ ಕಟ್ಟಕಡೆಯ ಹಳ್ಳಿಗಳಿಗೂ ನೀರಿನ ಲಭ್ಯತೆ ಆಗಿರುವುದನ್ನು ಪರಿಶೀಲಿಸುವುದು.

26) ಗ್ರಾಮಗಳಲ್ಲಿ ಅಳವಡಿಸಲಾದ ಶುದ್ಧ ಕುಡಿಯುವ ನೀರಿನ ಘಟಕಗಳ ಮಾಹಿತಿ ಬಿಂಬಿಸುವ ನಾಮಫಲಕಗಳನ್ನು ಗ್ರಾಮ ಪಂಚಾಯತಿಗಳಲ್ಲಿ ಪ್ರಕಟಿಸುವುದು.

27) ಶುದ್ಧ ಕುಡಿಯುವ ನೀರಿನ ಘಟಕಗಳ ಕಾರ್ಯನಿರ್ವಹಣೆ ಬಗ್ಗೆ ದುರಸ್ತಿಯಲ್ಲಿರುವುದು ಹಾಗೂ ಚಾಲನೆಯಲ್ಲಿರುವ ಮಾಹಿತಿಯನ್ನು ಪ್ರತಿನಿತ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಎಸ್.ಎಮ್.ಎಸ್. ಮೂಲಕ ಕಳುಹಿಸುವ ವ್ಯವಸ್ಥೆ ಮಾಡುವುದು.

28) ಶುದ್ಧ ಕುಡಿಯುವ ನೀರಿನ ಘಟಕಗಳ ದುರಸ್ತಿಗೆ ಸಂಬಂಧಿಸಿದಂತೆ ಅಧೀಕ್ಷಕ ಅಭಿಯಂತರರ ಹಂತದಲ್ಲಿ ದರ ಪಟ್ಟಿ ಪಡೆದು ಅದನ್ನು ಅನುಮೋದಿಸಿ ಎಲ್ಲಾ ಕಾರ್ಯಪಾಲಕ ಅಭಿಯಂತರರಿಗೆ ಕಳುಹಿಸುವುದು.

29) ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆಗೆ ಕರೆಯಲಾದ ಟೆಂಡರ್ ನಲ್ಲಿ ಯಾರು ಭಾಗವಹಿಸದಿದ್ದಲ್ಲಿ ಅಂತಹ ಘಟಕಗಳನ್ನು ಗ್ರಾಮ ಪಂಚಾಯತಿಗೆ ನಿರ್ವಹಣೆಗಾಗಿ ಹಸ್ತಾಂತರಿಸುವುದು.

**(ಕ್ರಮ: ಎಲ್ಲಾ ಜಿ.ಪಂ.ಮು.ಕಾ.ನಿ., ಆಯುಕ್ತರು, ಗ್ರಾನೀಸ)**

30) ರಾಜ್ಯದ 6021 ಗ್ರಾಮ ಪಂಚಾಯತಿಗಳ ಪೈಕಿ 6012 ಗ್ರಾಮ ಪಂಚಾಯತಿಗಳಲ್ಲಿ ತೆರಿಗೆ ಪರಿಷ್ಕರಣೆ ಮಾಡಲಾಗಿದೆ. ಈ ತೆರಿಗೆ ಪರಿಷ್ಕರಣೆಯಿಂದ ಒಟ್ಟಾರೆಯಾಗಿ ಎಷ್ಟು ತೆರಿಗೆ ಸಂಗ್ರಹದ ಹೆಚ್ಚಳವಾಗಿದೆ ಎಂಬುದರ ಬಗ್ಗೆ ಮಾಹಿತಿಯನ್ನು ಒದಗಿಸಲು ತಿಳಿಸಿದರು.

31) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತೆರಿಗೆ ಪರಿಷ್ಕರಣೆಯಾಗಿರುವುದನ್ನು ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ತೆರಿಗೆ ಪರಿಷ್ಕರಣೆಯ ನೈಜತೆಯನ್ನು ಪರಿಶೀಲಿಸುವುದು. ತೆರಿಗೆ ಪರಿಷ್ಕರಣೆ ಬಗ್ಗೆ ಹೊರಡಿಸಿರುವ ಎಲ್ಲಾ ಮಾರ್ಗಸೂಚಿ/ಸುತ್ತೋಲೆಗಳ ಪ್ರತಿಗಳನ್ನು ಸಭೆಯಲ್ಲಿ ವಿತರಿಸಲಾಗಿದ್ದು ಅದರಂತೆ ಕ್ರಮವಹಿಸುವುದು.

32) ಗ್ರಾಮ ಪಂಚಾಯತಿಗಳಲ್ಲಿ ಸಂಗ್ರಹಿಸುವ ವಿವಿಧ ಸೆಸ್ ಬಾಬ್ತನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಿ ಮಾಹಿತಿಯನ್ನು ಪಂಚತಂತ್ರದಲ್ಲಿ ಕಡ್ಡಾಯವಾಗಿ ಇಂಧೀಕರಿಸುವುದು.

33) ಪ್ರವಾಹ ಪೀಡಿತ ಜಿಲ್ಲೆಗಳ ಗ್ರಾಮ ಪಂಚಾಯತಿಗಳು ಹೊರತುಪಡಿಸಿ ಉಳಿದ ಗ್ರಾಮಪಂಚಾಯತಿಗಳು ತೆರಿಗೆ ಪರಿಷ್ಕರಣೆ ಮಾಡದಿರುವ ಹಾಗೂ ಅತಿ ಕಡಿಮೆ ತೆರಿಗೆ ವಸೂಲಾತಿ ಮಾಡಿರುವ ಗ್ರಾಮ ಪಂಚಾಯತಿ PDO ಗಳಿಗೆ ನೋಟಿಸನ್ನು ನೀಡಿ ಕ್ರಮವಹಿಸುವುದು.

34) ಗ್ರಾಮ ಪಂಚಾಯತಿಗಳಲ್ಲಿ ಕೈಗಾರಿಕೆ ಸ್ಥಾಪನೆಗೆ ಸಂಬಂಧಿಸಿದಂತೆ ವಿವಿಧ ರೀತಿಯ ನೆಪ ಒಡ್ಡಿ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಈಗಾಗಲೇ ಇಲಾಖಾವತಿಯಿಂದ ಹೊರಡಿಸಿರುವ ಮಾರ್ಗಸೂಚಿಯನುಸಾರ ಕೈಗಾರಿಕೆ ಪ್ರಾರಂಭಿಸುವುದಕ್ಕೆ ಪೂರ್ಣಪ್ರಮಾಣದ ಸಹಕಾರ ನೀಡಬೇಕು ಹಾಗೂ ಈ ಬಗ್ಗೆ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಕ್ರಮವಹಿಸುವುದು.

35) 2019-20ನೇ ಸಾಲಿನ DCB ವರದಿಯ ಚಾಲ್ತಿ ಬೇಡಿಕೆಯ ತೆರಿಗೆಯನ್ನು 100%ರಷ್ಟು ಎಲ್ಲಾ ಗ್ರಾಮ ಪಂಚಾಯತಿಗಳು ಕಡ್ಡಾಯವಾಗಿ ವಸೂಲಿ ಮಾಡುವಂತೆ ಕ್ರಮ ವಹಿಸುವುದು.

36) ಸಕಾಲದಡಿ ಅರ್ಜಿಗಳ ಸ್ವೀಕಾರದ ಪ್ರಮಾಣ ತೃಪ್ತಿಕರವಲ್ಲದ ಕಾರಣ ಸಾರ್ವಜನಿಕರು ನೀಡುವ ಅರ್ಜಿಗಳನ್ನು ಕಡ್ಡಾಯವಾಗಿ ಸಕಾಲದಲ್ಲಿ ಸ್ವೀಕರಿಸಿ ಇತ್ಯರ್ಥಗೊಳಿಸುವುದು. ಸಕಾಲ-ಬಳಕೆ ಉಲ್ಲಂಘಿಸುವುದನ್ನು CEOಗಳು ಗಂಭೀರವಾಗಿ ಪರಿಗಣಿಸುವುದು. ಜಿಲ್ಲಾ ಪಂಚಾಯತಿನಲ್ಲಿರುವ DPM ಗಳು ಈ ಬಗ್ಗೆ ಪ್ರತಿ ದಿನ ಪರಿಶೀಲಿಸಿ ಮಾಹಿತಿಯನ್ನು CEOಗಳಿಗೆ ನೀಡಲು ಕ್ರಮವಹಿಸುವುದು.

37) ವಿದ್ಯುತ್ ಸರಬರಾಜು ಕಂಪನಿಗಳಿಂದ ನೀಡುವ ವಿದ್ಯುತ್ ಬಿಲ್ ಗಳನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ಕಡ್ಡಾಯವಾಗಿ ಪರಿಶೀಲನೆ ಮಾಡಬೇಕು. ಹೆಚ್ಚುವರಿ ವಿದ್ಯುತ್ ಶುಲ್ಕ ಬಂದಿರುವುದು ಗಮನಿಸಿದ್ದಲ್ಲಿ, ಕಂಪನಿಯ ನಿಯಮದ ರೀತ್ಯ ಅವಕಾಶವಿರುವ "ಅಪೀಲ್" ನ್ನು ಸಕ್ಷಮ ಪ್ರಾಧಿಕಾರಿಗಳಿಗೆ ಸಲ್ಲಿಸಿ, ಸಮಸ್ಯೆಯನ್ನು ಇತ್ಯರ್ಥ ಪಡಿಸಿಕೊಳ್ಳುವುದು.

38) ಗ್ರಾಮ ಪಂಚಾಯತಿಗಳ 14ನೇ ಹಣಕಾಸು ಮತ್ತು ಸ್ವಂತ ಸಂಪನ್ಮೂಲದ ಖಾತೆಗಳಲ್ಲಿ ಅನುದಾನ ಲಭ್ಯವಿದ್ದರೂ, ವಿದ್ಯುತ್ ಬಿಲ್ ಪಾವತಿಸದೇ ಇರುವುದನ್ನು ಗಂಭೀರವಾಗಿ ಪರಿಗಣಿಸಿ, 3 ದಿನದೊಳಗೆ CEOಗಳು ಎಲ್ಲಾ ಗ್ರಾಮ ಪಂಚಾಯತಿಗಳಿಂದ ವಿದ್ಯುತ್ ಬಿಲ್ ಪಾವತಿಗೆ ಕ್ರಮವಹಿಸಲು ತಿಳಿಸಿದರು. ಈ ಬಗ್ಗೆ ಪ್ರತಿದಿನ ಮಾಹಿತಿಯನ್ನು ಇ-ಆಡಳಿತದಿಂದ ಪರಿಶೀಲಿಸುವುದು. 14ನೇ ಹಣಕಾಸು ಯೋಜನೆಯಡಿ ವಿದ್ಯುತ್ ಬಿಲ್ ಪಾವತಿಗಾಗಿ ಕಾದಿರಿಸಲಾದ ಅನುದಾನವನ್ನು ಬೇರೆ ಯಾವುದೇ ಉದ್ದೇಶಕ್ಕೆ ಬಳಸತಕ್ಕದ್ದಲ್ಲ ಎಂಬುದನ್ನು PDOಗಳಿಗೆ ತಿಳಿಯಪಡಿಸುವುದು.

39) E-FMS ನಲ್ಲಿ ಗ್ರಾಮ ಪಂಚಾಯತಿ ನೌಕರರ ವಿವರಗಳನ್ನು ಪೂರ್ಣ ಪ್ರಮಾಣದಲ್ಲಿ ದಾಖಲಿಸಲು ಬಾಕಿ ಇರುವ ಗ್ರಾಮ ಪಂಚಾಯತಿಗಳಿಗೆ ಕೂಡಲೇ, CEOಗಳು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡುವುದು.

40) ಆರೋಗ್ಯ ಕರ್ನಾಟಕ ಕಾರ್ಡ್ ವಿತರಣೆಯನ್ನು ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿಯೂ ತ್ವರಿತವಾಗಿ ಪ್ರಾರಂಭಿಸುವುದು. ಇದರ ಉಪಯೋಗವನ್ನು ಜನರಿಗೆ ತಲುಪಿಸಲು ಕ್ರಮವಹಿಸುವುದು.

41) ಹೊಸ ತಾಲ್ಲೂಕು ಪಂಚಾಯಿತಿಗಳ ನಿರ್ಮಾಣಕ್ಕೆ ಸ್ಥಳವನ್ನು ಗುರುತಿಸಿ ಮಾಹಿತಿ ನೀಡಿದ್ದಲ್ಲಿ ಅನುದಾನ ಒದಗಿಸಲು ಕ್ರಮವಹಿಸಲಾಗುವುದು.

**(ಕ್ರಮ: ಎಲ್ಲಾ ಜಿ.ಪಂ.ಮು.ಕಾ.ನಿ., ನಿರ್ದೇಶಕರು- PR-I, PR-II)**

42) NRLM ಯೋಜನೆಯಡಿ ಕೈಗೊಳ್ಳಲಾದ ಪೈಲೆಟ್ ಪ್ರಾಜೆಕ್ಟ್, ಕೇಸ್ ಸ್ಟಡೀಸ್ ಹಾಗೂ ಯೋಜನೆಯಡಿಯಲ್ಲಿ ಬಳಕೆ ಮಾಡಲಾದ ಹಣಬಳಕೆ ಪ್ರಮಾಣ ಪತ್ರಗಳನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲು ಅನುವಾಗುವಂತೆ ತುರ್ತಾಗಿ ಸಲ್ಲಿಸುವುದು.

43) MGNREGA ಯೋಜನೆಯಡಿ ಕ್ರಿಯಾ ಯೋಜನೆ ತಯಾರಿಕೆಯಲ್ಲಿ ವಲಯವಾರು ಅನುದಾನ ಹಂಚಿಕೆ ಮತ್ತು ಕೂಲಿ ಸಾಮಾಗ್ರಿ ಸಂಬಂಧಿಸಿದಂತೆ ನಿಗದಿತ 60-40 ಅನುಪಾತವನ್ನು ಜಿಲ್ಲಾವಾರು ಮಾತ್ರವಲ್ಲದೆ ತಾಲ್ಲೂಕು, ಗ್ರಾಮ ಪಂಚಾಯತ್ ವಾರು ಸಹಿತ ಪಾಲಿಸುವುದು.

44) MGNREGA ಯೋಜನೆಯಡಿ ಒಟ್ಟು ಅನುದಾನದಡಿ ರಸ್ತೆಗಳಿಗೆ ಶೇಕಡ 10 ಕ್ಕೆ ಮೀರದಂತೆ ಅನುದಾನ ನಿಗದಿಪಡಿಸುವುದು.

45) ಯೋಜನೆಯಡಿ ಒಟ್ಟು ಭರಿಸಲಾದ ವೆಚ್ಚದಡಿ ಅರಣ್ಯೀಕರಣ ವಲಯದಡಿ ಶೇಕಡ 1 ಕ್ಕಿಂತ ಕಡಿಮೆ ವೆಚ್ಚ ಭರಿಸಲಾದ ಕೊಡಗು, ಉಡುಪಿ, ದಕ್ಷಿಣಕನ್ನಡ, ಚಾಮರಾಜನಗರ, ಶಿವಮೊಗ್ಗ ಹಾಗೂ ಬೀದರ್ ಜಿಲ್ಲೆಗಳು ಸದರಿ ವಲಯದಡಿ ಹೆಚ್ಚಿನ ಪ್ರಗತಿ ಸಾಧನೆಗೆ ಕ್ರಮವಹಿಸುವುದು.

46) 2017-18 ನೇ ಸಾಲಿನಲ್ಲಿ ತೆಗೆದುಕೊಂಡ ಕಾಮಗಾರಿಗಳು ಈವರೆವಿಗೂ ಚಾಲ್ತಿಯಲ್ಲಿರುವುದನ್ನೂ ಪರಿಶೀಲಿಸಿ ಸದರಿ ಕಾಮಗಾರಿಗಳನ್ನು ಶೇಕಡ 100 ರಷ್ಟು ಪ್ರಸ್ತುತ ಸಾಲಿನಲ್ಲಿಯೇ ಪೂರ್ಣಗೊಳಿಸಲು ಸೂಚಿಸಲಾಯಿತು.

47) ಯೋಜನೆಯಡಿಯಲ್ಲಿನ ಎಲ್ಲಾ ಕಾಮಗಾರಿಗಳನ್ನು, ಮೂರು ಹಂತದಲ್ಲಿಯೂ Geo Tagging ಮಾಡಿ ಶೇಕಡ 100 ರಷ್ಟು ಪ್ರಗತಿ ಮಾಡುವುದು.

48) ಈ ಯೋಜನೆಯಡಿ ಕೈಗೊಳ್ಳಲಾದ ಸಾಮಾಜಿಕ ತಪಾಸಣೆ ವರದಿಗಳಲ್ಲಿ ಸೂಚಿಸಲಾದ ನ್ಯೂನ್ಯತೆಗಳನ್ನು ಸರಿಪಡಿಸಲು ಕೂಡಲೇ ಗಮನಹರಿಸುವುದು ಮತ್ತು ಹಣದುರುಪಯೋಗ ಪ್ರಕರಣಗಳಲ್ಲಿ ಸೂಚಿಸಲಾದ ವಸೂಲಾತಿ ಮೊತ್ತವನ್ನು ಸಂಬಂದಪಟ್ಟವರಿಂದ ವಸೂಲಿ ಮಾಡಲು ಕ್ರಮ ವಹಿಸುವುದು. ಈಗಾಗಲೇ ಸರ್ಕಾರದ ವತಿಯಿಂದ ನೀಡಲಾದ ಮಾರ್ಗಸೂಚಿಯಂತೆ ತಾಲ್ಲೂಕು ಪಂಚಾಯಿತ್ EO ಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯಲ್ಲಿ ಸಾಮಾಜಿಕ ತಪಾಸಣೆ ವರದಿಗಳ ಮೇಲೆ ಕೂಡಲೇ ಕ್ರಮ ವಹಿಸಲು ಸೂಚಿಸಲಾಯಿತು.

49) ವೈಜ್ಞಾನಿಕವಾಗಿ ಸಾಧ್ಯತೆಯಿರುವ ಸ್ಥಳಗಳಿಗೆ ಮಾತ್ರ ಬಹುಕಮಾನು ಚೆಕ್ ಡ್ಯಾಮ್ ಗಳನ್ನು ತೆಗೆದುಕೊಳ್ಳಲು ಸೂಚಿಸಲಾಯಿತು.

50) ಸಾಮಾಗ್ರಿ ವೆಚ್ಚ ಅತಿ ಕಡಿಮೆ ಇರುವ ತಾಲ್ಲೂಕು ಪಂಚಾಯತ್ ಗಳಲ್ಲಿ ಆದ್ಯತೆ ಮೇಲೆ ಈ ಕಾಮಗಾರಿಗಳನ್ನು ತೆಗೆದುಕೊಳ್ಳಲು ಕ್ರಮ ವಹಿಸುವುದು.

51) ಪ್ರತಿ ಗ್ರಾಮ ಪಂಚಾಯತಿಯಲ್ಲಿ ಕನಿಷ್ಠ 500 ಕಿಚನ್ ಗಾರ್ಡನ್ ಗಳನ್ನು ಕ್ರಿಯಾಯೋಜನೆಯಲ್ಲಿ ಅಳವಡಿಸಲು ಸೂಚಿಸಲಾಯಿತು.

52) ಪ್ರತಿ ಶಾಲೆಗೂ ಶಾಲಾ ಕಾಪೌಂಡ್, ಆಟದ ಮೈದಾನ, ಮಳೆನೀರು ಸಂಗ್ರಹ ಹಾಗೂ ಕಿಚನ್ ಗಾರ್ಡನ್ ಇವುಗಳನ್ನು ಅಳವಡಿಸುವ ಕ್ರಿಯಾ ಯೋಜನೆ ರೂಪಿಸುವುದು.

53) ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ನರೇಗಾ ಮತ್ತು ಎನ್.ಆರ್ ಎಲ್.ಎಂ. ಯೋಜನೆಯಡಿ ಒಗ್ಗೂಡಿಸಿ ಕೋಳಿಸಾಗಾಣಿಕೆ, ಕುರಿಸಾಗಾಣಿಕೆ, ಪಶುಸಂಗೋಪನೆ ಪುಷ್ಪೋದ್ಯಮ ಇತರೆ ಚಟುವಟಿಕೆಗಳನ್ನು ಕೈಗೊಳ್ಳುವುದು.

54) ಅಂಗನವಾಡಿ ಕಟ್ಟಡ ನಿರ್ಮಾಣ ಸಂಬಂಧ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆವತಿಯಿಂದ ಬರಬೇಕಾದ ಬಾಕಿ ಅನುದಾನವನ್ನು ರಾಜ್ಯ ಮಟ್ಟದಲ್ಲಿ ಸದರಿ ಇಲಾಖೆಯೊಂದಿಗೆ ಚರ್ಚಿಸಿ ಇತ್ಯರ್ಥಗೊಳಿಸುವುದು.

55) ಜಲಾಮೃತ ಯೋಜನೆಯಡಿ ಈಗಾಗಲೇ ಕೈಗೊಳ್ಳಲಾದ ಕಾಮಗಾರಿಗಳನ್ನು ಪ್ರಸ್ತುತ ಸಾಲಿನಲ್ಲಿ ಪೂರ್ಣಗೊಳಿಸುವುದು.

56) ಜಿಲ್ಲಾ ಮಟ್ಟದಲ್ಲಿ ನರೇಗಾ IEC Co-ordinators, KSRSAC NRDM Co-ordinators ಹಾಗೂ ಆಯ್ದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಜಲಾಮೃತ Mobile APP ಮೂಲಕ ಜಲಮೂಲಗಳನ್ನು ಸರ್ವೆ ನಡೆಸುವ ಕುರಿತು ತರಬೇತಿ ನೀಡಲಾಗಿದೆ. Smart ಫೋನ್ ನಲ್ಲಿ APP ನ್ನು ಡೌನ್ ಲೋಡ್ ಮಾಡಿ ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಬರುವ ಕೆರೆ,ಕಟ್ಟೆ, ಕಲ್ಯಾಣಿ, ಗೋಕಟ್ಟೆ, ಮುಂತಾದ ಜಲ ಮೂಲ ಸ್ಥಿತಿಯನ್ನು ಗ್ರಾಮ ಪಂಚಾಯಿತಿ PDO ಗಳಿಂದ ಅಪ್ ಲೋಡ್ ಮಾಡಿಸುವುದು.

57) 2020 ನೇ ಸಾಲಿನಲ್ಲಿ ವಿಶ್ವ ಪರಿಸರ ದಿನದಂದು ಸಸಿಗಳನ್ನು ನೆಡಲು ಯೋಜನೆ ರೂಪಿಸಿ ( ಹೊಸ ಗ್ರಾಮ ಪಂಚಾಯಿತಿಗಳನ್ನು ಪರಿಗಣಿಸಿ) ನರ್ಸರಿಗಳಿಂದ ಅಗತ್ಯ ಪ್ರಮಾಣದ ಸಸಿಗಳನ್ನು ಪಡೆಯಲು ಕ್ರಮವಹಿಸುವುದು. ಈಗಾಗಲೇ ನೆಡಲಾದ ಸಸಿಗಳ ಬದುಕುಳಿದ ಪ್ರಮಾಣಗಳನ್ನು ತಿಳಿಯಲು ಮೂರನೇ ವ್ಯಕ್ತಿಗಳಿಂದ ತಪಾಸಣೆಗೊಳಿಸುವುದು.

**(ಕ್ರಮ: ಎಲ್ಲಾ ಜಿ.ಪಂ.ಮು.ಕಾ.ನಿ., ಆಯುಕ್ತರು, ಗ್ರಾಮೀಣಾಭಿವೃದ್ಧಿ,/ನಿರ್ದೇಶಕರು ಜಲಾಮೃತ)**

58) ನೆರೆ ಪರಿಹಾರ ಕಾಮಗಾರಿಗಳಿಗೆ ಈಗಾಗಲೇ ಬಿಡುಗಡೆ ಮಾಡಲಾದ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ಪ್ರಸ್ತುತ ಸಾಲಿನಲ್ಲಿಯೇ ವಿನಿಯೋಗಿಸಲು ಕ್ರಮ ವಹಿಸುವುದು.

59) 3054 ಲೆಕ್ಕ ಶೀರ್ಷಿಕೆಯಡಿ ಪಾವತಿಗೆ ಬಾಕಿ ಇರುವ ಬಿಲ್ಲುಗಳನ್ನು, ಕಾರ್ಯಪಾಲಕ ಅಭಿಯಂತರರಿಂದ ದೃಢೀಕರಿಸಿ ಅನುದಾನದ ಅಗತ್ಯತೆ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡುವುದು.

**(ಕ್ರಮ: ಎಲ್ಲಾ ಜಿ.ಪಂ.ಮು.ಕಾ.ನಿ/ ನಿರ್ದೇಶಕರು ,ಗ್ರಾಮೂಸ-1)**

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಸಂಖ್ಯೆ:ಗ್ರಾಅಪ/27/ಯೋಉಮಾ/2020 ದಿನಾಂಕ: 19.02.2020

ಇವರಿಗೆ:

1) ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸಂಬಂಧಪಟ್ಟ ವಿಷಯದಡಿ ತೆಗೆದುಕೊಂಡ ಕ್ರಮದ ಅನುಪಾಲನಾ ವರದಿಯನ್ನು ನಡವಳಿ ತಲುಪಿದ 1 ವಾರದೊಳಗೆ ಸಂಬಂಧಪಟ್ಟ ಆಯುಕ್ತರು/ನಿರ್ದೇಶಕರುಗಳಿಗೆ ಕಳುಹಿಸಿಕೊಡುವುದು.

2) ಇಲಾಖಾ ಮುಖ್ಯಸ್ಥರು/ನಿರ್ದೇಶಕರುಗಳು ತಮಗೆ ಸಂಬಂಧಪಟ್ಟ ವಿಷಯದಡಿ ಅಗತ್ಯ ಕ್ರಮ ಕೈಗೊಳ್ಳುವುದರ ಜೊತೆಗೆ, ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಂದ ಪಡೆದ ಅನುಪಾಲನಾ ವರದಿಯನ್ನು ಒಗ್ಗೂಡಿಸಿ ತಮ್ಮ ಅಭಿಪ್ರಾಯದೊಂದಿಗೆ ಅನುಪಾಲನಾ ವರದಿಯನ್ನು ಯೋಜನಾ ಉಸ್ತುವಾರಿ ಮತ್ತು ಮಾಹಿತಿ ಶಾಖೆಗೆ (ಪಿ.ಎಂ.ಐ.) ಕಳುಹಿಸುವುದು.

3) ಎಲ್ಲಾ ಜಿಲ್ಲಾ ಪಂಚಾಯತ್ ಅಭಿಯಂತರರು ಹಾಗೂ ಕಾರ್ಯಪಾಲಕ ಅಭಿಯಂತರರು (ಗ್ರಾನೀಸ) ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ (ಮು.ಕಾ.ನಿ ರವರ ಮೂಲಕ).

# ಅನುಬಂಧ

1. ಶ್ರೀ ಬಿ.ಎಸ್. ಯಡಿಯೂರಪ್ಪ, ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.
2. ಶ್ರೀ ಕೆ.ಈಶ್ವರಪ್ಪ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.
3. ಶ್ರೀ ಎಲ್.ಕೆ.ಅತೀಕ್, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4. ಶ್ರೀಮತಿ ಉಮಾ ಮಹಾದೇವನ್ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
5. ಡಾ: ವಿಶಾಲ್, ಆರ್ ಆಯುಕ್ತರು, ಗ್ರಾ.ಕು.ನೀ.ನೈ.ಇಲಾಖೆ.
6. ಪ್ರಕಾಶ್ ಕುಮಾರ್, ಹೆಚ್.ಎಸ್.ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.ನೈ.ಇಲಾಖೆ.
7. ಶ್ರೀ ಅನಿರುದ್ಧ್ ಶ್ರವನ್, ಆಯುಕ್ತರು, ಗ್ರಾಮೀಣಾಭಿವೃದ್ಧಿ.
8. ಶ್ರೀಮತಿ ಮಮತಾ, ಅಭಿಯಾನ ನಿರ್ದೇಶಕರು, ಎನ್.ಆರ್.ಎಲ್.ಎಮ್.
9. ಶ್ರೀ ಬೂವನಹಳ್ಳಿ ನಾಗರಾಜ್, ನಿರ್ದೇಶಕರು, ಗ್ರಾಮೂಸೌ-1.
10. ಶ್ರೀ ಅಶ್ರಫುಲ್ ಹಸನ್ , ನಿರ್ದೇಶಕರು, ಪಂಚಾಯತ್ ರಾಜ್-1.
11. ಶ್ರೀ ಪಿ.ಶಿವಶಂಕರ್, ನಿರ್ದೇಶಕರು, ಪಂಚಾಯತ್ ರಾಜ್-2.
12. ಶ್ರೀ ಪ್ರಾಣೇಶ್ ರಾವ್, ನಿರ್ದೇಶಕರು, ಯೋಉಮಾ.
13. ಶ್ರೀಮತಿ ಡಿ.ಆರ್.ಕಲಾವತಿ, ಉಪ ನಿರ್ದೇಶಕರು, ಯೋಉಮಾ.
14. ಶ್ರೀ ಪಾಲಯ್ಯ,ನಿರ್ದೇಶಕರು, ಕೆ.ಆರ್.ಐ.ಡಿ.ಎಲ್.
15. ಶ್ರೀ ಬಿ.ನಿಜಲಿಂಗಪ್ಪ, ನಿರ್ದೇಶಕರು, ಜಲಾಮೃತ.
16. ಶ್ರೀ ರಮೇಶ್, ಉಪನಿರ್ದೇಶಕರು,ಎಸ್.ಜಿ.ವೈ, ಗ್ರಾಅಪಂ.ರಾಜ್.
17. ಶ್ರೀ ಸಿ.ಕೆ. ಮಲ್ಲಪ್ಪ ಮುಖ್ಯ ಕಾರ್ಯಾಚರಣೆ ಅಧಿಕಾರಿ, COO, KRRDA ಪರವಾಗಿ
18. ಶ್ರೀ ವಿಜಯಕುಮಾರ್ ಚವಣವರ್, ಮುಖ್ಯ ಇಂಜಿನಿಯರ್, ಪಂ.ರಾಜ್ ಇಂ. ಇಲಾಖೆ,
19. ಶ್ರೀ ಇಂತಿಯಾಜ್, SPM, ಗಣಕಯಂತ್ರಕೋಶ.
20. ಶ್ರೀಮತಿ ಗಂಗೂಬಾಯಿ ರಮೇಶ್ ಮಾನಕರ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬಾಗಲಕೋಟೆ.
21. ಶ್ರೀ ಶಿವರಾಮೇಗೌಡ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬೆಂಗಳೂರು(ನ).
22. ಶ್ರೀ ನಾಗರಾಜ.ಎಸ್.ಎಂ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬೆಂಗಳೂರು(ಗ್ರಾ).
23. ಶ್ರೀ ಎಸ್.ಬಿ.ಮುಳ್ಳಳ್ಳಿ, ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯಿತಿ, ಬೆಳಗಾವಿ.
24. ಶ್ರೀ ನಿತೀಶ್ ಕೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬಳ್ಳಾರಿ.

25. ಶ್ರೀ ಗ್ಯಾನೇಂದ್ರ ಕುಮಾರ ಗಂಗ್ವಾರ್ ,ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬೀದರ್.
26. ಶ್ರೀ ಗೋವಿಂದ ರೆಡ್ಡಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ವಿಜಯಪುರ.
27. ಶ್ರೀ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪರವಾಗಿ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು.
28. ಶ್ರೀ ಪೂವಿತ, ಎಸ್.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಾಮರಾಜನಗರ.
29. ಫೌಜೀಯ ತಾರನಮ್.ಬಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ.
30. ಶ್ರೀಮತಿ ಸತ್ಯಭಾಮ.ಸಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ.
31. ಡಾ|| ಸೆಲ್ವಮಣಿ ಆರ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ದಕ್ಷಿಣ ಕನ್ನಡ.
32. ಪದ್ಮ ಬಸವಂತಪ್ಪ,ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ದಾವಣಗೆರೆ.
33. ಡಾ|| ಬಿ.ಸಿ. ಸತೀಶ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಧಾರವಾಡ.
34. ಡಾ|| ಆನಂದ್ ಕೆ ,ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಗದಗ.
35. ಡಾ|| ಪಿ.ರಾಜ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಕಲಬುರಗಿ.
36. ಶ್ರೀ ಬಿ.ಎ. ಪರಮೇಶ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
37. ಶ್ರೀ ರಮೇಶ್ ದೇಸಾಯಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಹಾವೇರಿ.
38. ಶ್ರೀ ಗುಡುರ್, ಭೀಮಸೇನ್, ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯಿತಿ, ಕೊಡಗು.
39. ಶ್ರೀ ದರ್ಶನ್ ಹೆಚ್.ವಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಕೋಲಾರ.
40. ಶ್ರೀ ರಘುನಂದನ್ ಮೂರ್ತಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಕೊಪ್ಪಳ.
41. ಶ್ರೀ ಕೆ.ಯಾಲಕ್ಕಿಗೌಡ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಮಂಡ್ಯ.
42. ಶ್ರೀಮತಿ ಕೆ.ಜ್ಯೋತಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಮೈಸೂರು.
43. ಶ್ರೀ ಲಕ್ಷ್ಮಿಕಾಂತ್ ರೆಡ್ಡಿ.ಜಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ರಾಯಚೂರು.
44. ಶ್ರೀ ಮೊಹಮದ್ ಇಕ್ರಮುಲ್ಲಾ ಶರೀಫ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ರಾಮನಗರ.
45. ಶ್ರೀ ಶುಭ ಕಲ್ಯಾಣ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪರವಾಗಿ, ಜಿಲ್ಲಾ ಪಂಚಾಯಿತಿ, ತುಮಕೂರು.
46. ಶ್ರೀಮತಿ ವೈಶಾಲಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಶಿವಮೊಗ್ಗ.
47. ಶ್ರೀಮತಿ ಪ್ರೀತಿ ಗೆಹಲೋಟ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಉಡುಪಿ.
48. ಶ್ರೀ ಎಂ.ಡಿ. ರೋಷನ್,ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಉತ್ತರ ಕನ್ನಡ.
49. ಶ್ರೀಮತಿ ಶಿಲ್ಪಾ ಶರ್ಮ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಯಾದಗಿರ್.
50. ಶ್ರೀ ಆರ್.ಎನ್. ಪುರೋಹಿತ್, ಕಾರ್ಯಪಾಲಕ ಅಭಿಯಂತರರು (ಗ್ರಾನೀಸ) ಬಾಗಲಕೋಟೆ.
51. ಶ್ರೀ ಸುರೇಶ ಎಂ. ತಂಗೋಳ ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಬೆಂಗಳೂರು (ನ)
52. ಶ್ರೀ ಕೆ.ಟಿ.ನಾಗರಾಜ ಅಧೀಕ್ಷಕ ಅಭಿಯಂತರರು. (ಗ್ರಾನೀಸ) ಬೆಂಗಳೂರು (ನ)

53. ಶ್ರೀ ರವಿ ಎಸ್ ಸೂರನ್ ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಬೆಂಗಳೂರು (ಗ್ರಾ)

54. ಶ್ರೀ ಕೆ.ಎಸ್. ಅಸೂಟಿ ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಬೆಳಗಾವಿ.

55. ಶ್ರೀ ಚಿಕ್ಕೋಡಿ ಎ.ಎಸ್. ಹಣಗಾರ ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಬೆಳಗಾವಿ.

56. ಶ್ರೀ ಮನ್ಮಥಯ್ಯ ಎಂ. ಸ್ವಾಮಿ ಅಧೀಕ್ಷಕ ಅಭಿಯಂತರರು, (ಗ್ರಾನೀಸ) ಬೆಳಗಾವಿ.

57. ಶ್ರೀ ಆರ್. ಪ್ರಭು, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಬಳ್ಳಾರಿ.

58. ಶ್ರೀ ಶಿವಾಜಿ ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಬೀದರ್.

59. ಶ್ರೀ ಎಸ್.ಕುಮಾರ್, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ವಿಜಯಪುರ.

60. ಶ್ರೀ ರಾಜ್ ಗೋಪಾಲ್ ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಚಿಕ್ಕ ಮಗಳೂರು.

61. ಶ್ರೀ ಬಿ.ಎಸ್. ಚಕ್ರಪಾಣಿ, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಚಿಕ್ಕ ಮಗಳೂರು.

62. ಶ್ರೀ ಹೆಚ್.ಎಮ್. ಶಿವಶಂಕರಯ್ಯ, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಚಾಮರಾಜನಗರ.

63. ಶ್ರೀ ಎಸ್.ಜಿ.ಲೋಕೇಶ್, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಚಿಕ್ಕಬಳ್ಳಾಪುರ.

64. ಶ್ರೀ ಹೆಚ್. ಹನುಮಂತಯ್ಯ, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಚಿತ್ರದುರ್ಗ.

65. ಶ್ರೀ ಜಿ.ನರೇಂದ್ರಬಾಬು, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ದಕ್ಷಿಣ ಕನ್ನಡ.

66. ಶ್ರೀ ಹೆಚ್. ನಾಗಪ್ಪ, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ದಾವಣಗೆರೆ.

67. ಶ್ರೀ ಆರ್.ವಿ.ಮನವಳ್ಳಿ, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಧಾರವಾಡ.

68. ಶ್ರೀ ಪಿ.ಎ. ಕನವಳ್ಳಿ, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಗದಗ.

69. ಶ್ರೀ ಸತೀಶ್, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಕಲಬುರ್ಗಿ.

70. ಶ್ರೀ ಶಿವಾಜಿ, ಅಧೀಕ್ಷಕ ಅಭಿಯಂತರರು, (ಗ್ರಾನೀಸ) ಕಲಬುರ್ಗಿ.

71. ಶ್ರೀ ಎಸ್.ಎ. ಶ್ರೀನಿವಾಸ್, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಹಾಸನ.

72. ಶ್ರೀ ಎಂ.ಎಸ್. ರೇವಣ್ಣನವರ್, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಕೊಡಗು.

73. ಶ್ರೀ ಟಿ. ವೆಂಕಟಚಲಯ್ಯ, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಕೋಲಾರ.

74. ಶ್ರೀ ಎಸ್.ಭರತ್ ಕುಮಾರ್, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಕೊಪ್ಪಳ.

75. ಶ್ರೀ ಎಸ್. ಕುಮಾರ್, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಮಂಡ್ಯ.

76. ಶ್ರೀ ಲಕ್ಷ್ಮೀಶ್.ಎಂ. ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಮೈಸೂರು.

77. ಶ್ರೀ ಎಸ್.ಕೆ.ಚಂದ್ರಶೇಖರ್, ಅಧೀಕ್ಷಕ ಅಭಿಯಂತರರು, (ಗ್ರಾನೀಸ) ಮೈಸೂರು.

78. ಶ್ರೀ ಗಣಪತಿ ಸಾಕರೆ, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ರಾಯಚೂರು.

79. ಶ್ರೀ ಚಂದ್ರಹಾಸ, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ರಾಮನಗರ.

80. ಶ್ರೀ ಪ್ರಕಾಶ್, ಎಸ್.ಕೆ. ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ತುಮಕೂರು.

81. ಶ್ರೀ ಜಿ.ಎಸ್. ಕುಮಾರ್, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಶಿವಮೊಗ್ಗ.

82. ಶ್ರೀ ಪಿ.ರಾಜಾ, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಉಡುಪಿ.

83. ಶ್ರೀ ಎಸ್. ವಿ.ಬುಗೇಟಿ, ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಉತ್ತರ ಕನ್ನಡ.

84. ಶ್ರೀ ಮಲ್ಲಿಕಾರ್ಜುನ, ಹೆಚ್. ಕಾರ್ಯಪಾಲಕ ಅಭಿಯಂತರರು, (ಗ್ರಾನೀಸ) ಯಾದಗಿರಿ.

85. ಶ್ರೀ ಬಿ.ಎಸ್.ಮಂಜುನಾಥ ಅಧೀಕ್ಷಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಬಾಗಲಕೋಟೆ.

86. ಶ್ರೀ ಎಂ.ಎಸ್. ಕೃಷ್ಣಮೂರ್ತಿ, ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಬೆಂಗಳೂರು (ನ).

87. ಶ್ರೀ ಜೆ.ಆರ್.ಮುಕ್ಕಣನಾಯ್ಕ, ಅಧೀಕ್ಷಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಬೆಂಗಳೂರು (ನ).

88. ಶ್ರೀ ಬಿ.ಹೆಚ್. ಮಂಜುನಾಥ, ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಬೆಂಗಳೂರು (ಗ್ರಾ).

89. ಶ್ರೀ ಎ.ಬಿ.ಹೊನ್ನಾವರ, ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಬೆಳಗಾವಿ.

90. ಶ್ರೀ ಎನ್.ಕೆ.ಜಜಂತ್ರಿ, ಅಧೀಕ್ಷಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಬೆಳಗಾವಿ.

91. ಶ್ರೀ ಹೆಚ್.ಯಮೂನಾನೂರಪ್ಪ, ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಬಳ್ಳಾರಿ.

92. ಶ್ರೀ ಸಿ.ಎನ್.ಚಂದ್ರಶೇಖರಯ್ಯ, ಅಧೀಕ್ಷಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಬಳ್ಳಾರಿ.

93. ಶ್ರೀ ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ವಿಜಯಪುರ.

94. ಶ್ರೀ ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಚಿಕ್ಕ ಮಗಳೂರು.

95. ಶ್ರೀ ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಚಾಮರಾಜನಗರ.

96. ಶ್ರೀ ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಚಿತ್ರದುರ್ಗ.

97. ಶ್ರೀ ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ದಕ್ಷಿಣ ಕನ್ನಡ.

98. ಶ್ರೀ ಯು.ರವೀಂದ್ರ, ಅಧೀಕ್ಷಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ದಕ್ಷಿಣ ಕನ್ನಡ.

99. ಶ್ರೀ ಪರಮೇಶ್ವರಪ್ಪ, ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ದಾವಣಗೆರೆ.

100. ಶ್ರೀ ಕೃಷ್ಣಾಜಿ ಚವ್ಹಾಣ್, ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಧಾರವಾಡ.

101. ಶ್ರೀ ಮಂದೋಲಿ ಮನೋಜ್, ಅಧೀಕ್ಷಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಧಾರವಾಡ.

102. ಶ್ರೀ ಪಿ.ಎ.ಕನವಲ್ಲಿ, ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಗದಗ.

103. ಶ್ರೀ ಆನಂದ್ ಕುಮಾರ್, ಎಮ್.ಜವರೇಗೌಡ, ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಹಾಸನ.

104. ಶ್ರೀ ಕುಬೇರ್.ವಿ.ಹಂಚಯ್ಯ, ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಹಾವೇರಿ.

105. ಶ್ರೀ ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಕೊಡಗು.

106. ಶ್ರೀ ಎಂ.ಎನ್. ಬೋಗೇಗೌಡ, ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಕೋಲಾರ.

107. ಶ್ರೀ ಪದ್ಮನಾಭನ್, ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಮಂಡ್ಯ.

108. ಶ್ರೀ ಅಧೀಕ್ಷಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಮಂಡ್ಯ.

109. ಶ್ರೀಮತಿ ಲಕ್ಷ್ಮೀ ಪ್ರಸನ್ನ, ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ರಾಮನಗರ.

110. ಶ್ರೀ ಟಿ.ಹೆಚ್.ನಾಗಪ್ಪ, ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಶಿವಮೊಗ್ಗ.

111. ಶ್ರೀ ದಯನಂದ್, ಆರ್. ನಾಯಕ್, ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಉತ್ತರ ಕನ್ನಡ.

112. ಶ್ರೀ ಮಲ್ಲಿಕಾರ್ಜುನ್, ಹೆಚ್. ಕಾರ್ಯಪಾಲಕ ಅಭಿಯಂತರರು, (ಪಂ.ರಾಜ್.ಇಂಜಿನಿಯರಿಂಗ್ ವಿಭಾಗ) ಉತ್ತರ ಕನ್ನಡ.